
**ಕಥೆ**






## ವೈ.ಕೆ.ಸಂಧ್ಯಾ ಶರ್ಮ

ಕಲೆ: ಈಶ್ವರ್ ಚರಂತಿಮಠ


ಅವಳು ಚಪ್ಪಲಿ ಹಾಕಿಕೊಳ್ಳುತ್ತಿರುವುದನ್ನು ಕಂಡು ಹೊರಗೆ ಹೊರಟಳು ಎಂದು ಅವನಿಗೆ ಗೊತ್ತಾಯಿತು. ಆದರವನು ಕೇಳಲಿಲ್ಲ. ಅವಳು ಹೇಳಿ ಹೋಗುವ ಅಭ್ಯಾಸ ತಪ್ಪಿಸಿ ಎಷ್ಟೋ ದಿನಗಳಾಗಿವೆ. ಉದಾಸೀನವಾಗಿ ಪೇಪರ್ ಬಿಚ್ಚಿದ.

ಚಪ್ಪಲಿಯ 'ಚರಕ್ ಚರಕ್' ಸದ್ದು ಗೇಟು ತೆರೆದ ಮೇಲೆ ಎರಡು ಹೆಜ್ಜೆ ಕೇಳಿಸಿತು. ವ್ಯಾನಿಟಿ ಬ್ಯಾಗನ್ನು ಕೈಯಲ್ಲಿ ತೂಗಾಡಿಸುತ್ತಾ ಅವಸರವಾಗಿ ಮುಂದೆ ಹೆಜ್ಜೆ ಇಡುತ್ತಿದ್ದಳು. ಒಂದು ಗಳಿಗೆ ತಡೆದು ನಿಂತಳು. ಹೌದು... ತನಗ್ಯಾಕಿಷ್ಟು ಆತುರ, ಈಗಲೇ ಅರ್ಜೆಂಟಾಗಿ ಹೋಗಬೇಕಾದದ್ದಾದರೂ ಎಲ್ಲಿಗೆ? ಹೊಳೆಯಲಿಲ್ಲ. ಇದ್ದರಲ್ಲವೇ ಹೊಳೆಯುವುದು! ಮನೆ ಬಿಡುವಾಗ ಇಂಥ ಕಡೆ ಹೋಗಬೇಕು ಎಂದೇನೂ ಯೋಚಿಸಿ ಹೊರಟಿರಲಿಲ್ಲ. ಅವನು ಎರಡನೇ ಶನಿವಾರ ರಜೆ ಎಂದು ಮನೆಯಲ್ಲಿಯಲ್ಲಿದ್ದ. ಮನೆಯ ಯಾವುದೋ ಒಂದು ರೂಮಿನಲ್ಲಿ ಅವಳು ಪೇಪರ್ ಓದುತ್ತಲೋ, ಬೇರೇನೋ ಕೆಲಸ ಮಾಡುತ್ತಲೋ ಇರಬಹುದಿತ್ತು. ಆದರೆ ಅವಳಿಗೇಕೋ ಮುಜುಗರ. ಅವನ ಕಣ್ಣ ಮುಂದೆ ತನ್ನ ದೇಹವನ್ನು ಆಚೀಚೆ ಓಡಾಡಿಸುವುದಕ್ಕೆ ವಾಕರಿಕೆ. ಭಾನುವಾರ ಒಂದು ದಿನ ಬಿಟ್ಟು ಅವಳಿಗೆ ಉಳಿದ ಆರು ದಿನಗಳೇ ಹೆಚ್ಚು ಇಷ್ಟ. ಯಾಕಾದರೂ ಭಾನುವಾರ ಬರುತ್ತದೋ ಎಂದು ಬೈದುಕೊಳ್ಳುತ್ತಾಳೆ. ಮನಸ್ಸು ಬಂದ ಗಿರಾಕಿ ಅವಳು. ಪ್ರತಿದಿನದಂತೆ ತನಗೆ ಖುಷಿ ಬಂದ ಹಾಗೆ ಕಾಲ ಕಳೆಯಲಾಗದು. ಅವನಿಗೆ ರಜವಿದ್ದ ದಿನ- ಬೇಗ ಎದ್ದು ಕಾಫಿ, ತಿಂಡಿ, ಅಡುಗೆ ಮಾಡಿ ಮುಚ್ಚಿಟ್ಟು ಇಂತಹ ಕಡೆ ಹೋಗುತ್ತೇನೆ ಎಂದು ಅವನಿಗೆ ಹೇಳುವ ಗೋಜಿಗೆ ಹೋಗದೆ ಮನೆಯಿಂದ ಒಂದು ಫರ್ಲಾಂಗ್ ದೂರದಲ್ಲಿರುವ ಬಸ್‌ಸ್ಟಾಪಿಗೆ ನಡೆದು ಬರುತ್ತಾಳೆ. ಅಲ್ಲಿಂದ ಹಳೆಯ ಗೆಳತಿಯರನ್ನು ಹುಡುಕಿಕೊಂಡೋ ಅಥವಾ ತಾಯಿಯ ಮನೆಗೋ ಕಾಲು ಎಳೆಯುತ್ತದೆ. ಅವಳು ಹೇಳದೇ ಹೋದರೂ ಅವಳು ಪ್ರತಿ ಭಾನುವಾರ ಎಲ್ಲಿಗೆ ಹೋಗುತ್ತಾಳೆ ಎಂದವನಿಗೆ ಗೊತ್ತು.

ಪ್ರತಿವಾರವೂ ತಪ್ಪದೇ ಹಾಜರಾಗುವ ಮಗಳನ್ನು ಕಂಡರೆ ಅವಳ ತಾಯಿಗೆ ಸಿಡಿ-ಮಿಡಿ. ಬುದ್ಧಿ ಹೇಳುತ್ತಾರೆ. ಮನೆಗೆ ವಾಪಸ್ಸು ಬಿಟ್ಟುಬರಲು ಪ್ರಯತ್ನಿಸುತ್ತಾರೆ. ಕಡೆಗೆ ಮೊಂಡಾಗಿ ಕುಳಿತ ಅವಳನ್ನು ಏನೂ ಮಾಡಲಾಗದೆ ಗದರಿಸುತ್ತಾರೆ, ಅಸಮಾಧಾನದಿಂದ ಗೊಣಗಿಕೊಳ್ಳುತ್ತಾರೆ. ಯಾವುದಕ್ಕೂ ಅವಳು ಡೋಂಟ್ ಕೇರ್ .... ಜೋರಾಗಿ ನಕ್ಕು, 'ಹೋಗಮ್ಮ ನಿಂಗೊಂದು ಹುಚ್ಚು' ಎಂದು ಜಡೆಯ ತುದಿಯನ್ನು ಎದೆಯ ಮೇಲಿಂದ ರಪ್ಪನೆ ಬೆನ್ನಿಗೆ ಎಸೆದುಕೊಂಡು